ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಎಚ್. ಹುಚ್ಚೆಮಾಸ್ತಿಗೌಡ.—ಕೆರೆಯ capacityಗಿಂತ ಹೆಚ್ಚು ಆಚ್ಚುಕಟ್ಟು ಮಾಡುವುದು ಸೂಕ್ತವೆ ?

ಅಧ್ಯಕ್ಷರು.—ಅದು ಅಭಿಪ್ರಾಯ.

---

## Revenue Cases.

*Q.*—104. Sri K. PRABHAKAR (Nelamangala—Scheduled Castes).—

Will the Government be pleased to state :—

(*a*) how many revenue cases have been entertained from 1947 to 1951-52 and again from 1952-53 to 1954-55 ;

(*b*) of them, how many were without lawyer's help and how many were with lawyer's services ;

(*c*) how many were regular ones and how many were review cases ?

*A.*—Sri Kadidal MANJAPPA (Minister for Revenue and Public Works).—

(*a*) The question is not clear. If the information is wanted in respect of all the revenue cases it is not readily available. If it is in respect of only the revenue appeals before Government it is as follows :—

| | No. |
|---|---|
| 1947 to 1951-52 ... | 1,323 |
| 1952 to 1954-55 ... | 1,379 |

(*b*) and (*c*) Not readily available.

ಶ್ರೀ ಕೆ. ಪ್ರಭಾಕರ್.—ಇದರಲ್ಲಿ 'how many were regular ones, and how many were review cases, ಎಂದು ಕೇಳಿರುವುದಕ್ಕೆ ಗೊತ್ತಾಗುವುದಿಲ್ಲವೆಂದು ಹೇಳಿದೆ, ವಿವರಗಳಿಲ್ಲವೆ ?

Mr. SPEAKER.—Not readily available.

ಶ್ರೀ ಕೆ. ಪ್ರಭಾಕರ್.—ಲಾಯರುಗಳ ಸಹಾಯ ವಿಲ್ಲದೆ ಎಷ್ಟು ಕೇಸುಗಳು ಫೈನಲಾಗಿವೆ ಎಂದು ಕೇಳಿದ್ದಾರೆ, ಹೇಳುವುದಕ್ಕಾಗುವುದಿಲ್ಲವೆಂದು ಹೇಳಿದ್ದೀರಿ, ಕಾರಣವೇನು ?

*ಶ್ರೀ ಕಡಿದಾಳ್ ಮಂಜಪ್ಪ.—ಪ್ರತಿಯೊಂದು ಕೇಸಿನ ರಿಕಾರ್ಡನ್ನೂ ಹುಡುಕಬೇಕು. ಲಾಯರುಗಳು ಬಂದಿದ್ದರೇ ಅಥವಾ ಇಲ್ಲವೆ ಎಂಬುದನ್ನು ಹೇಳುವುದು ಕಷ್ಟ.

ಶ್ರೀ ಜಿ. ಪುಟ್ಟಸ್ವಾಮಿ.—ಹಣವಿಲ್ಲದೇಯಿರುವವರು ಲಾಯರನ್ನಿಟ್ಟುಕೊಳ್ಳುವುದಕ್ಕವಕಾಶವಿಲ್ಲದಿದ್ದರೆ ಅವರಿಗೆ ಏನು ಸಹಾಯ ಮಾಡುತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅಪೀಲಿನಲ್ಲಿ ಖುದ್ದು ವಾದ ಮಾಡುವುದಕ್ಕವಕಾಶವಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಅದಕ್ಕೂ ಶಕ್ತಿಯಿಲ್ಲದಿರುವ ನಂದರ್ಭದಲ್ಲಿ ಏನು ರಕ್ಷಣೆ ಕೊಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ತಮಗೆ ತಿಳಿದಿರುವುದನ್ನು ಹೇಳುವುದಕ್ಕವಕಾಶವಿದೆ. ಸಹಾನುಭೂತಿಯಿಂದ ಸರ್ಕಾರದವರು ಕೇಳುತ್ತಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಪ್ರತಿ ಕಕ್ಷಿ ಲಾಯರನ್ನಿಟ್ಟಿರುತ್ತಾರೆ. ಲಾಯರು ವಾದಮಾಡುತ್ತಾರೆ. ಆ ನಂದರ್ಭದಲ್ಲಿ ಅವನಿಗೆ ತೊಂದರೆಯಾಗುವುದಿಲ್ಲವೆ ? ಅಂಥ ನಂದರ್ಭದಲ್ಲಿ ಲಾಯರನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Mr. SPEAKER.—That need not be answered.

---

## Shuttle Train from Maddur to Mysore.

*Q.*—585. Sri SHIVANANJE GOWDA (Mysore Taluk).—

Will the Government be pleased to state :—

(*a*) whether it has come to their notice that owing to only four bogies being attached to the Shuttle train that comes from Maddur to Mysore, the students and other public that travel by this train are experiencing much difficulty for want of accommodation ;

(*b*) whether they would recommend to the Central Government to attach two more bogies to this Shuttle train so that there may be at least six bogies and thus solve the difficulty experienced by the students and public for want of accommodation ?

*A.*—Sri Kadidal MANJAPPA (Minister for Revenue and Public Works).—

(*a*) No.

(*b*) Does not arise in view of reply to (*a*).

ಶ್ರೀ ಶಿವನಂಜೇಗೌಡ.—ಮದ್ದೂರು ಮೈಸೂರು ಷೆಟ್ಲ್‌ನಲ್ಲಿ ನಾಲ್ಕೇ ಬೋಗಿಗಳನ್ನು ಹಾಕುತ್ತಿರುವುದರಿಂದ ಜನರಿಗೂ ವಿದ್ಯಾರ್ಥಿಗಳಿಗೂ ತೊಂದರೆಯಾಗುತ್ತಿದೆಯೆ ಎಂದು ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದಾರೆ, ಯಾರಿಂದ ಈ ವರ್ತಮಾನ ತರಿಸಿಕೊಂಡರು ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಗಮನಕ್ಕೆ ಇದುವರೆಗೆ ಯಾರೂ ತಂದಿಲ್ಲ.

ಶ್ರೀ ಶಿವನಂಜೇಗೌಡ.—ಇಲ್ಲವೆಂದು ವರ್ತಮಾನ ಯಾರಿಂದ ಬಂತು ?

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ನಮಗೆ ಯಾರೂ ತಿಳಿಸಲಿಲ್ಲ.